ವಿತ್ತ ಸಂಚಿಕೆ
OCTOBER 2024

# INSPIRE INDIA



ಶರಣ್ ಪಾಟೀಲ್
ಆರ್ಥಿಕ ತಜ್ಞರು

## ಸಲಹೆ ನಮ್ಮದು ಹೂಡಿಕೆ ನಿಮ್ಮದು

INSPIRE INDIA WEALTH PRIVATE LTD. @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. Mail: info@inspireindiafs.com Website: www.inspireindiafs.com



ತುಂಬಾ ಯಶಸ್ಸು ಸಾಧಿಸುವವರ ಗುಟ್ಟೇನೆಂದರೆ ಅವರ ಬಳಿ ಯಾವತ್ತೂ ಬದಲಿ ಯೋಜನೆ ಇರುತ್ತದೆ.
–ಜೇಮ್ ಯೋರ್ಕೆ



ಗುರಿ ಮತ್ತು ಉದ್ದೇಶದ ಜೊತೆಗೆ ಸತತ ಪ್ರಯತ್ನ ಮತ್ತು ಧೈರ್ಯ ಮೇಳೈಸಿದರಷ್ಟೇ ಸಾಧನೆಯ ಉತ್ತುಂಗ ಏರಲು ಸಾಧ್ಯ
–ಜಾನ್ ಎಫ್. ಕೆನಡಿ

ಸಂತೋಷವು ಗಣಿತದ ಮೂಲತತ್ವಕ್ಕೆ ವಿರುದ್ಧವಾದುದು. ಅದನ್ನು ಹಂಚಿದರಷ್ಟೇ ಹೆಚ್ಚುತ್ತಾ ಹೋಗುತ್ತದೆ.
–ಪೌಲ್ ಕೊಯಿಲೊ



# ಹೂಡಿಕೆಗೂ ಬೇಕು ಗುರುವಿನ ಪಾಠ



**ಶಿಕ್ಷಕರ** ದಿನ ನಾವು ನಮ್ಮ ಜೀವನದ ದಾರಿಯಲ್ಲಿ ನಮ್ಮ ಮೇಲೆ ಪ್ರಭಾವ ಬೀರಿದ ಅನೇಕ ಮಾರ್ಗದರ್ಶಕರನ್ನು ನೆನಪಿಸಿಕೊಳ್ಳುತ್ತೇವೆ. ಆ ಪಟ್ಟಿಯಲ್ಲಿ ನಮ್ಮ ಶಾಲಾ ಶಿಕ್ಷಕರು, ಕಾಲೇಜು ಪ್ರೊಫೆಸರ್‌ಗಳು, ಮಾರ್ಗದರ್ಶಕರು ಮತ್ತು ಪಾಲಕರು ಸೇರಿದ್ದಾರೆ. ಇದೇ ಸಂದರ್ಭದಲ್ಲಿ ನಮ್ಮ ಮೇಲೆ ಪ್ರಭಾವ ಬೀರಿದ, ನಮ್ಮ ಹಣಕಾಸು ಸೌಧಕ್ಕೊಂದು ರೂಪ ನೀಡಿದ ಹೂಡಿಕೆ ತಜ್ಞರನ್ನು ಕೂಡ ಈ ಸ್ಮರಿಸಿಕೊಳ್ಳುವುದು ಔಚಿತ್ಯಪೂರ್ಣ. ನಾವು ಹೂಡಿಕೆಯನ್ನು ಅರ್ಥ ಮಾಡಿಕೊಳ್ಳಲು ಮತ್ತು ನಮ್ಮ ಸಂಪತ್ತಿನ ನಿರ್ವಹಣೆಯಲ್ಲಿ ಅವರ ಸಲಹೆಗಳ ಪಾತ್ರ ಬಹಳ ದೊಡ್ಡದು. ಅವರ ಜೀವನಗಾಥೆಗಳು, ಅವರ ಕಾರ್ಯತಂತ್ರಗಳು ನಮಗೊಂದು ಒಳನೋಟ ದಕ್ಕುವಲ್ಲಿ ಸಹಾಯ ಮಾಡಿವೆ.

ಹೂಡಿಕೆ ಎನ್ನುವುದು ಸುಲಭಕ್ಕೆ ದಕ್ಕುವ ಬಾಬತ್ತಲ್ಲ. ಅದೊಂದು ಸಂಕೀರ್ಣ ಜಗತ್ತು. ಅದಕ್ಕೆ ಸರಿಯಾದ ಮಾರ್ಗದರ್ಶಕರು ಬೇಕಾಗುತ್ತಾರೆ. ಅವರ ಒಳನೋಟಗಳು ನಮ್ಮ ಹೂಡಿಕೆಯ ದಾರಿಗೆ ಬೆಳಕಾಗಿವೆ. ಇವರಲ್ಲಿ ವಾರೆನ್ ಬಫೆಟ್ ಅವರ ಸುದೀರ್ಘಾವಧಿ ಹೂಡಿಕೆ ಕಾರ್ಯತಂತ್ರಗಳು, ಸ್ಟಾಕ್‌ಗಳ ಆಯ್ಕೆಯಲ್ಲಿ ಪೀಟರ್ ಲಿಂಚ್ ಅವರ ವಿಶಿಷ್ಟವಾದ ಆಯ್ಕೆಗಳು ಸೇರಿವೆ. ಸಂಪತ್ತಿನ ಸೃಷ್ಟಿಯಲ್ಲಿ ಮತ್ತು ಹಣಕಾಸಿನ ನಿರ್ವಹಣೆಯಲ್ಲಿ ಅವರ ವಿಭಿನ್ನ ನಿಲುವುಗಳನ್ನು ನಾವು ಗೌರವಿಸಬೇಕಾಗಿದೆ. ಅವರ ಒಟ್ಟಾರೆ ಹಣಕಾಸಿನ ಜರ್ನಿಯಲ್ಲಿ ನಮಗೆ ದಕ್ಕುವ ಅಂಶಗಳನ್ನು ಆಯ್ಕೆಮಾಡಿಕೊಳ್ಳಬೇಕಾಗಿದೆ.

**1.ವಾರೆನ್ ಬಫೆಟ್:** ಹೂಡಿಕೆಯ ಮಾತು



ಬಂದ ಕೂಡಲೇ ನಮ್ಮ ಕಿವಿಗೆ ಬೀಳುವ ಹೆಸರು ವಾರೆನ್ ಬಫೆಟ್. ಮೌಲ್ಯಯುತ ಹೂಡಿಕೆಯಲ್ಲಿ ಅವರ ಸಿದ್ಧಾಂತಗಳು ಜನಪ್ರಿಯವಾಗಿದ್ದು 'ದೇವವಾಣಿ' ಎಂದೇ ಪರಿಗಣಿಸಲಾಗುತ್ತದೆ. ಮೂಲಭೂತ ಅಂಶಗಳು ಪ್ರಬಲವಾಗಿರುವ



## ಪುಟ ನೋಟ

ಮ್ಯುಚ್ಯುಯಲ್ ಫಂಡ್ ಮೇಲೆ ಸಾಲ: ಒಂದು ಜಾಣ ನಡೆ 3



ಹಿರಿಯರ ಆರೋಗ್ಯ ವಿಮೆ: ಸಮಗ್ರ ಸುರಕ್ಷಾ ಕವಚ 5



ಮತ್ತು ಸ್ಪರ್ಧಾತ್ಮಕ ಮೌಲ್ಯವನ್ನು ಹೊಂದಿದ ಉದ್ಯಮಗಳಲ್ಲಿ ಹೂಡಿಕೆ ಮಾಡುವ ಬಗ್ಗೆ ಬಫೆಟ್ ಹೆಚ್ಚು ಒತ್ತು ನೀಡುತ್ತಾರೆ. 'ಉಳಿದವರು ಆಸೆಬುರುಕರಾಗಿದ್ದಾಗ ಭಯದಿಂದ ಇರಬೇಕು ಮತ್ತು ಉಳಿದವರು ಭಯದಿಂದ ಇದ್ದಾಗ ಆಸೆಬುರುಕರಾಗಿರಬೇಕು' ಎಂಬುದು ಅವರ ಸಲಹೆ. ಅಂದರೆ ಇದು ಸುದೀರ್ಘಾವಧಿ ಹೂಡಿಕೆಯನ್ನು ಕಾಯ್ದುಕೊಳ್ಳುವ ಹಾಗೂ ಮಾರುಕಟ್ಟೆಯ ಏರಿಳಿತದ ನಡುವೆಯೂ ಶಿಸ್ತು ಕಾಯ್ದುಕೊಳ್ಳುವ ಅಗತ್ಯವನ್ನು ಪ್ರತಿಪಾದಿಸುತ್ತದೆ.



**2.ಬೆಂಜಮಿನ್ ಗ್ರಹಾಂ:** ಇವರನ್ನು 'ಮೌಲ್ಯಯುತ ಹೂಡಿಕೆಯ ಪಿತಾಮಹ' ಎಂದೇ ಕರೆಯಲಾಗುತ್ತದೆ. 'ಬುದ್ಧಿವಂತ ಹೂಡಿಕೆದಾರ' ಎಂಬ ವಿಶಿಷ್ಟ ವ್ಯಾಖ್ಯೆಯ ಮೂಲಕ ಆಧುನಿಕ ಹೂಡಿಕೆ ಸಿದ್ಧಾಂತಕ್ಕೆ ಶಂಕುಸ್ಥಾಪನೆ ಮಾಡಿದವರು ಗ್ರಹಾಂ. ಅವರು ಸ್ವಭಾವತಃ ಮೌಲ್ಯದ ಮಹತ್ವ ಮತ್ತು ಸುರಕ್ಷತೆಯ ಮಾರ್ಜಿನ್ ಬಗ್ಗೆ ಹೆಚ್ಚಿನ ಒತ್ತು ನೀಡುತ್ತಾರೆ ಮತ್ತು ಒಂದು ಸ್ಟಾಕ್‌ನ ಸ್ವಭಾವತಃ ಮೌಲ್ಯಕ್ಕಿಂತ ಕಡಿಮೆ ಮೌಲ್ಯದಲ್ಲಿ ಖರೀದಿ ಮಾಡಬೇಕು ಎಂದು ಹೂಡಿಕೆದಾರರಿಗೆ ಸಲಹೆ ನೀಡುತ್ತಾರೆ. ಇದರಿಂದ ಅಪಾಯವನ್ನು ತಗ್ಗಿಸಿ ಹೆಚ್ಚು ಆದಾಯವನ್ನು ಗಳಿಸಬಹುದು ಎನ್ನುವುದು ಅವರ ನಿಲುವು.

'ಮಿಸ್ಟರ್ ಮಾರ್ಕೆಟ್' ಪರಿಕಲ್ಪನೆಯನ್ನು ಮೊದಲು ಪರಿಚಯ ಮಾಡಿದ್ದು ಬೆಂಜಮಿನ್ ಗ್ರಹಾಂ. ಷೇರು ಮಾರುಕಟ್ಟೆಯ ಭಾವನಾತ್ಮಕ ಓಲಾಟಕ್ಕೆ ಒಂದು ರೂಪಕವಾಗಿ ಇದನ್ನವರು ಹೇಳಿದ್ದಾರೆ. ಅವರ ಈ ವಿಶ್ಲೇಷಣೆಯ ಅರ್ಥ, ಮಾರುಕಟ್ಟೆಯ ಚಿತ್ತೋನ್ಮಾದಕ್ಕೆ ಮರುಳಾಗದಿರಿ ಬದಲಾಗಿ ನಿಮ್ಮದೇ ಆದ ಸಂಶೋಧನೆ ಮತ್ತು ಮೌಲ್ಯಮಾಪನದ ಮೂಲಕ ಮಾಡಿ ಎಂಬುದು. ಮಾರುಕಟ್ಟೆಯನ್ನು ನಿಶ್ಚಿತವಾಗಿ ಊಹೆಮಾಡಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಅರ್ಥಮಾಡಿಕೊಂಡು ಆದ್ಯಂತವಾಗಿ ಸಂಯಮವನ್ನು ಕಾಯ್ದುಕೊಳ್ಳಬೇಕು ಎಂಬುದು ಅವರು ನೀಡುವ ಸಲಹೆ.



**3.ಪೀಟರ್ ಲಿಂಚ್:** ಫಿಡೆಲಿಟಿ ಮೆಗೆಲನ್ ಫಂಡ್‌ನ ಮಾಜಿ ವ್ಯವಸ್ಥಾಪಕರಾದ ಪೀಟರ್ ಲಿಂಚ್, ಬೆಳವಣಿಗೆ ಆಧಾರಿತ ಸ್ಟಾಕ್‌ಗಳನ್ನು ಗುರುತಿಸುವ ಸಾಮರ್ಥ್ಯವನ್ನು ಹೊಂದಿರುವವರು. ಯಾವ ಕಂಪನಿಗಳನ್ನು ನಿಮಗೆ ಅರ್ಥಮಾಡಿಕೊಳ್ಳಲು ಮತ್ತು ಅದರ ಮೇಲೆ ನಂಬಿಕೆ ಇಡಲು ಸಾಧ್ಯವೋ ಅವುಗಳಲ್ಲಿ ಮಾತ್ರ ಹೂಡಿಕೆಗಳನ್ನು ಮಾಡಿ ಎನ್ನುವುದು ಅವರ ಸಲಹೆ. ಒಟ್ಟಾರೆಯಾಗಿ, 'ನಿಮಗೆಷ್ಟು ತಿಳಿದಿದೆಯೋ ಅಷ್ಟನ್ನು ಮಾತ್ರ ಹೂಡಿಕೆ ಮಾಡಿ.' ಮಾಹಿತಿಪೂರ್ಣ ಹೂಡಿಕೆ ನಿರ್ಧಾರಗಳನ್ನು ಕೈಗೊಳ್ಳಲು ಬೇಕಾಗಿರುವುದು ನಿರಂತರ ಸಂಶೋಧನೆ ಮತ್ತು ಅದರಿಂದ ನಮಗೆ ದಕ್ಕಬಹುದಾದ ಒಳನೋಟಗಳಿಂದ ಎಂಬುದು ಅವರ ಅಭಿಪ್ರಾಯ.



**4.ಚಾರ್ಲಿ ಮುಂಗರ್:** ಬರ್ಕ್‌ಶೈರ್ ಹಥಾವೇ ಉಪಾಧ್ಯಕ್ಷರಾಗಿರುವ ಚಾರ್ಲಿ ಮುಂಗರ್ ವಾರೆನ್ ಬಫೆಟ್ ಅವರ ಬಹುಕಾಲದ ಸಹೋದ್ಯಮಿ. ಅವರು ಅಪಾರ ಬುದ್ಧಿ ಕ್ಷಮತೆ ಮತ್ತು ಸೂಕ್ಷ್ಮ ದೃಷ್ಟಿಕೋನಗಳನ್ನು ಒಳಗೊಂಡ ಹೂಡಿಕೆ ಸಿದ್ಧಾಂತಗಳಿಗೆ ಖ್ಯಾತರಾದವರು. ಹೂಡಿಕೆಯಲ್ಲಿ ಯಾವತ್ತೂ ಬಹುಶಿಸ್ತೀಯ ವಿಧಾನಗಳನ್ನು ಅನುಸರಿಸಬೇಕು ಎಂಬ ನಿಲುವನ್ನು ಹೊಂದಿದವರು. ಅಂದರೆ ಹೂಡಿಕೆ ಅವಕಾಶ ಸಿಕ್ಕಾಗ ಅದರ ಆರ್ಥಿಕತೆ, ಮನೋವಿಜ್ಞಾನ ಮತ್ತು ಹಿನ್ನೆಲೆ ಸೇರಿದಂತೆ ಅನೇಕ ಆಯಾಮಗಳಿಂದ ನೋಡುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು ಎಂಬುದು ಮುಂಗರ್ ಅವರು ನಂಬಿರುವ ಸಿದ್ಧಾಂತ. ಇದರಿಂದ ಹೂಡಿಕೆದಾರರು ನಾನಾ ಮೂಲಗಳಿಂದ ಜ್ಞಾನವನ್ನು ಸಂಗ್ರಹಿಸಿ ಉತ್ತಮ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಅರಿವಿನ ಕೊರತೆಯಿಂದ ಪೂರ್ವಗ್ರಹಕ್ಕೆ ಒಳಗಾಗಿ ನಿರ್ಧಾರ ಕೈಗೊಳ್ಳುವ ಬದಲಿಗೆ ತರ್ಕಬದ್ಧ ನಿರ್ಧಾರಕ್ಕೆ ಬರುವುದರಿಂದ ಅನೇಕ ರಿಸ್ಕ್‌ಗಳಿಗೆ ಕಡಿವಾಣ ಹಾಕಬಹುದು.



**5.ರಾಕೇಶ್ ಝುಂಝುನ್‌ವಾಲಾ:** ಅನೇಕ ಸಂದರ್ಭಗಳಲ್ಲಿ ಭಾರತದ ವಾರೆನ್ ಬಫೆಟ್ ಎಂದು ಕರೆಯಲಾಗುವ ರಾಕೇಶ್ ಝುಂಝುನ್‌ವಾಲಾ ಅವರ ಹೆಸರನ್ನು ಪ್ರಸ್ತಾಪಿಸದೇ ಈ ಪಟ್ಟಿಯನ್ನು ಕೊನೆಗೊಳಿಸಲು ಸಾಧ್ಯವಿಲ್ಲ. ಯಾವುದೇ ಸ್ಟಾಕ್‌ನ್ನು ಸುದೀರ್ಘ ಅವಧಿ ಹಿಡಿದಿಟ್ಟುಕೊಳ್ಳುವುದೇ ನಿಜವಾದ ಹೂಡಿಕೆ ಕಾರ್ಯತಂತ್ರ ಎಂಬುದು ಝುಂಝುನ್‌ವಾಲಾ ಅವರ ನಂಬಿಕೆ. ಹೂಡಿಕೆದಾರರ ಭಾವನೆಗಳು ಅವರ ಹೂಡಿಕೆ ನಿರ್ಧಾರಗಳ ಮೇಲೆ ಪ್ರಭಾವ ಬೀರಬಾರದು ಮತ್ತು ತಾಳ್ಮೆಗಿಂತ ದೊಡ್ಡ ಪರೀಕ್ಷೆ ಇನ್ನೊಂದಿಲ್ಲ ಎಂಬ ಅಭಿಪ್ರಾಯ ಅವರದ್ದಾಗಿದೆ. ಕೈಗೆ ಬರುವ ಅವಕಾಶಗಳನ್ನು ಯಾವತ್ತೂ ಕಳೆದುಕೊಳ್ಳಬಾರದು ಮತ್ತು ಸ್ಪರ್ಧಾತ್ಮಕ ಪ್ರಯೋಜನಗಳನ್ನು ಹೊಂದಿದ ಕಂಪನಿಗಳಲ್ಲಿ ಹೂಡಿಕೆ ಮಾಡುವುದು ಸೂಕ್ತ. ಜೊತೆಗೆ ಹೂಡಿಕೆ ಕ್ಷೇತ್ರದಲ್ಲಿ ತಪ್ಪುಗಳಿಂದ ಪಾಠಗಳನ್ನು ಕಲಿಯಬೇಕು. ಅದು ಯಶಸ್ಸಿಗೆ ಅತ್ಯಂತ ನಿರ್ಣಾಯಕ ಎಂಬುವುದು ಝುಂಝುನ್‌ವಾಲಾ ಅವರ ನಿಲುವು.



**6.ರಾಮ್‌ದೇವ್ ಅಗರ್ವಾಲ್:** ಭಾರತದ ಹೂಡಿಕೆ ಕ್ಷೇತ್ರದ ಬಹುದೊಡ್ಡ ಹೆಸರು ರಾಮ್‌ದೇವ್ ಅಗರ್ವಾಲ್. ಮೋತಿಲಾಲ್ ಓಸ್ವಾಲ್ ಫೈನಾನ್ಷಿಯಲ್ ಸರ್ವಿಸ್‌ನ ಸಹಸಂಸ್ಥಾಪಕರೂ ಹೌದು. ಸಂಪತ್ತು ಸೃಷ್ಟಿಯಲ್ಲಿ ಸಂಚಿತ ಹಣದ ಶಕ್ತಿ (power of compounding) ಮಹತ್ವದ್ದು ಎಂದು ನಂಬಿದವರು. ಒಂದು ನಿರ್ದಿಷ್ಟ ಅವಧಿಯಲ್ಲಿ ಸಾಕಷ್ಟು ಪ್ರಮಾಣದ ಹಣಕಾಸು ಪ್ರಗತಿಯನ್ನು ಸಾಧಿಸುವ ಸಾಮರ್ಥ್ಯ ಸಂಚಿತ ಹಣಕ್ಕಿದೆ ಎನ್ನುವುದು ಅಗರ್ವಾಲ್ ಅವರ ಹೂಡಿಕೆ ಸಿದ್ಧಾಂತ. ಇದರ ಲಾಭವನ್ನು ಪೂರ್ತಿಯಾಗಿ ಪಡೆದುಕೊಳ್ಳಬೇಕಾದರೆ ಹೂಡಿಕೆಯನ್ನು ಸಾಧ್ಯವಿರುವಷ್ಟು ಬೇಗ ಆರಂಭಿಸಬೇಕು. ಎಷ್ಟು ಚಿಕ್ಕ ವಯಸ್ಸಿನಲ್ಲಿ ಹೂಡಿಕೆ ಶುರು ಮಾಡುವಿರೋ ಅಷ್ಟು ಸುದೀರ್ಘ ಅವಧಿಯ ಸಂಚಿತ ನಿಧಿಯ ಪ್ರಯೋಜನ ನಿಮ್ಮದಾಗುತ್ತದೆ. ಅದಕ್ಕಾಗಿ ದೊಡ್ಡ ಮೊತ್ತವನ್ನು ಕೂಡಿಡಬೇಕಾಗಿಲ್ಲ, ಸಣ್ಣ ಮೊತ್ತದಿಂದಲೇ ಆರಂಭ ಮಾಡಬಹುದು. ಪವರ್ ಆಫ್ ಕಂಪೌಂಡ್‌ನ ಪೂರ್ಣ ಲಾಭ ಪಡೆದುಕೊಳ್ಳಲು ಗಳಿಸಿದ ಹಣವನ್ನು ಮರು ಹೂಡಿಕೆ ಮಾಡಬೇಕು. ಆಗ ಹೂಡಿಕೆ ಬಂಡವಾಳಪಟ್ಟಿ ಇನ್ನಷ್ಟು ಎತ್ತರಕ್ಕೆ ಬೆಳೆಯುತ್ತದೆ.

**ಬಾಟಮ್ ಲೈನ್:** ಶಿಕ್ಷಕರ ದಿನದ ನೆವದಲ್ಲಿ ಭಾರತ ಮತ್ತು ವಿಶ್ವದ ನಾನಾ ಭಾಗದಲ್ಲಿರುವ ಕೆಲವು ಹೂಡಿಕೆ ಗುರುಗಳ ಮಾರ್ಗದರ್ಶನವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಿದ್ದೇವೆ. ಈ ಮಾರ್ಗದರ್ಶಿಗಳು ಅನೇಕ ಕಾರ್ಯತಂತ್ರಗಳ ವಿಚಾರದಲ್ಲಿ ಮಹತ್ವದ ಪಾಠಗಳನ್ನು ನಮಗೆ ಕಲಿಸಿದ್ದಾರೆ. ಈ ಪಾಠಗಳಲ್ಲಿ ಅತ್ಯಂತ ಮುಖ್ಯವಾಗಿ ನೆನಪಿಟ್ಟುಕೊಳ್ಳಬೇಕಾದುದು power of compounding ಮತ್ತು ತಾಳ್ಮೆ. ಈ ಮಾರ್ಗದರ್ಶಕರ ಸಿದ್ಧಾಂತಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ತಮ್ಮದೇ ಹೂಡಿಕೆ ಪಯಣದಲ್ಲಿ ಅನುಸರಿಸುವುದರಿಂದ ಯಾವುದೇ ಹೂಡಿಕೆ ಮಾಡುವಾಗ ಮಾಹಿತಿಯ ಕೊರತೆ ಉಂಟಾಗುವುದಿಲ್ಲ. ಹಾಗಾಗಿಯೇ ಹಣಕಾಸು ಯಶಸ್ಸಿನ ಸಾಧ್ಯತೆಯೂ ಹೆಚ್ಚುತ್ತದೆ.

# ಮುಚ್ಯುಯಲ್ ಫಂಡ್ ಮೇಲೆ ಸಾಲ:

# ಒಂದು ಜಾಣ ನಡೆ



**ನಮಗೆ ದುಡ್ಡಿನ ಜರೂರತ್ತು ಬಿದ್ದಾಗ ನಮ್ಮ ಮುಂದೆ ಇರುವ ಅನೇಕ ಮಾರ್ಗಗಳ ಬಗ್ಗೆ ಯೋಚನೆ ಮಾಡುತ್ತೇವೆ. ಅಂತಹ ಸಂದರ್ಭದಲ್ಲಿ ಭವಿಷ್ಯದಲ್ಲಿ ಆಗಬಹುದಾದ ನಷ್ಟದ ಬಗ್ಗೆ ಯೋಚನೆ ಮಾಡುವುದಿಲ್ಲ. ನಾವು ಮುಚ್ಯುಯಲ್ ಫಂಡ್ ಹೂಡಿಕೆದಾರರಾಗಿದ್ದರೆ ಆ ಎಂಎಫ್ ಯೂನಿಟ್‌ಗಳನ್ನೇ ಮಾರಿ ಸದ್ಯದ ತುರ್ತು ತೀರಿಸಿಕೊಳ್ಳೋಣ ಎಂದು ಯೋಚಿಸುತ್ತೇವೆ. ಆದರೆ ಮುಚ್ಯುಯಲ್ ಫಂಡ್ ಹೂಡಿಕೆಯನ್ನು ಕರಗಿಸುವುದರ ಬದಲಿಗೆ ನೀವು ಅದರಿಂದಲೇ ಸಾಲ ಪಡೆದರೆ ಹೇಗೆ? ಇದು ಚಿನ್ನ ಮತ್ತು ರಿಯಲ್ ಎಸ್ಟೇಟ್‌ನ್ನು ಒತ್ತೆಯಿಟ್ಟು ಹೇಗೆ ಬ್ಯಾಂಕಿನಿಂದ ಹಣವನ್ನು ಪಡೆದ ಹಾಗೆ ಸುಲಭ.......**

**ಮಕ್ಕಳ** ಶಿಕ್ಷಣ, ಮದುವೆ, ಮತ್ತು ನಮ್ಮದೇ ನಿವೃತ್ತಿ ನಮ್ಮ ಜೀವನದ ನಿರ್ಣಾಯಕ ಸಂಗತಿಗಳಾಗಿವೆ. ಅದಕ್ಕಾಗಿ ನಾವು ಪ್ರತ್ಯೇಕ ಪ್ಲಾನ್ ಮಾಡಿಕೊಂಡಿರುತ್ತೇವೆ. ಅಯೋಜಿತವಾದ ವೆಚ್ಚಗಳನ್ನು ನಿಭಾಯಿಸಲೂ ನಮ್ಮ ಬಳಿ ತುರ್ತುನಿಧಿ ಇರುತ್ತದೆ. ನಾವು ಎಷ್ಟೇ ಕರಾರುವಕ್ಕಾಗಿ ಯೋಜನೆಗಳನ್ನು ಮಾಡಿಕೊಂಡರೂ ಕೂಡ ಅನಿರೀಕ್ಷಿತ ವೆಚ್ಚಗಳು ನಮ್ಮ ಮನೆಯ ಬಾಗಿಲನ್ನು ತಟ್ಟುವುದು ನಿಲ್ಲುವುದಿಲ್ಲ. ಅಂತಹ ಇಕ್ಕಟ್ಟಿನ–ಬಿಕ್ಕಟ್ಟಿನ ಸಂದರ್ಭದಲ್ಲಿ ನಾವು ತಕ್ಷಣ ಕೈಹಾಕುವುದು ಉಳಿತಾಯಕ್ಕೆ. ಹೂಡಿಕೆಗಳನ್ನು ಮಾರಿಬಿಡೋಣ ಎಂಬ ಯೋಚನೆ ತಲೆಯಲ್ಲಿ ಸುಳಿಯುತ್ತದೆ. ಅದ–ರಿಂದ ನಷ್ಟವಾಗುತ್ತದೆ ಎಂಬುದು ನಮಗೆ ಗೊತ್ತಿದ್ದರೂ ಚಿಂತೆ ಮಾಡುವುದಿಲ್ಲ. ದುರಾದೃಷ್ಟಕ್ಕೆ ನಮ್ಮಲ್ಲಿ ಅನೇಕರು ಆಯ್ಕೆ ಮಾಡಿಕೊಳ್ಳುವುದು ಮುಚ್ಯುಯಲ್ ಫಂಡ್ ಯೂನಿಟ್‌ಗಳನ್ನು. ಯಾಕೆಂದರೆ ಅದರಿಂದ ಲಭ್ಯವಾಗುವ ಲಿಕ್ವಿಡಿಟಿ ನಮ್ಮನ್ನು ಸುಲಭವಾಗಿ ಪ್ರೇರೇಪಿಸುತ್ತದೆ. ಅಲ್ಪಾವಧಿಯಲ್ಲಿ ಇಂತಹುದೊಂದು ಆಯ್ಕೆ ಸೂಕ್ತ ಅನ್ನಿಸಿದರೂ ದೀರ್ಘಾವಧಿಯಲ್ಲಿ ಹೂಡಿಕೆದಾರರ ಸಂಪತ್ತು ಸೃಷ್ಟಿಯ ಜರ್ನಿಯ ಮೇಲೆ ಬಹಳ ದೊಡ್ಡ ಪರಿಣಾಮವನ್ನು ಬೀರುವುದು ಮಾತ್ರ ನಿಶ್ಚಿತ. ಹಾಗಾದರೆ ನಮ್ಮ ಮುಂದೆ ಇನ್ಯಾವುದಾದರೂ ಉತ್ತಮ ಆಯ್ಕೆ ಇದೆಯೇ? ಇದೆ, ನಿಶ್ಚಿತವಾಗಿ. ನಿಮ್ಮ ಮುಚ್ಯುಯಲ್ ಫಂಡ್ ಹೂಡಿಕೆಯನ್ನು ಕರಗಿಸುವುದರ ಬದಲಿಗೆ ನೀವು ಅದರಿಂದಲೇ ಸಾಲವನ್ನು ಪಡೆಯಬಹುದು. ನಿಮ್ಮಲ್ಲಿರುವ ಚಿನ್ನ ಮತ್ತು ರಿಯಲ್ ಎಸ್ಟೇಟ್‌ನ್ನು ಒತ್ತೆಯಿಟ್ಟು ಹೇಗೆ ಬ್ಯಾಂಕಿನಿಂದ ಹಣವನ್ನು ಪಡೆಯುವಿರೋ ಅದೇ ರೀತಿ ನಿಮ್ಮಲ್ಲಿರುವ ಮುಚ್ಯುಯಲ್ ಫಂಡ್‌ಗಳನ್ನಿಟ್ಟು ಸಾಲವನ್ನು ಪಡೆಯಬಹುದು. ಇಂತಹ ಸೌಲಭ್ಯವನ್ನು ಸೆಕ್ಯುರಿಟಿಗಳಿಗೆ ಪ್ರತಿಯಾಗಿ ಪಡೆದ ಸಾಲ (ಎಲ್‌ಎಎಸ್) ಎಂದು ಕರೆಯುತ್ತೇವೆ.

ಎಲ್‌ಎಎಸ್ ಸೌಲಭ್ಯದಿಂದಾಗಿ ಆತ/ಆಕೆ ಯಾವುದೇ ಪರಿಸ್ಥಿತಿಯಲ್ಲಿದ್ದರೂ ಕೂಡ ತನ್ನ ಅಲ್ಪಾವಧಿ ಹಣಕಾಸು ಅಗತ್ಯಗಳನ್ನು ಪೂರೈಸಿಕೊಂಡು ಇನ್ನೊಂದು ಕಡೆಯಿಂದ ಹೂಡಿಕೆಯನ್ನೂ ಮುಂದುವರಿಸಿಕೊಂಡು ಹೋಗಬಹುದು. ಇದನ್ನು ಒಂದು ಉದಾಹರಣೆ ಮೂಲಕ ನೋಡೋಣ ಬನ್ನಿ.

ಒಬ್ಬರು 1999ರ ಏಪ್ರಿಲ್ ಹತ್ತರಂದು ಸೆನ್ಸೆಕ್ಸ್ ಟಿಆರ್‌ಐನಲ್ಲಿ ಮಾಸಿಕ 10000 ರೂ. ಎಸ್‌ಐಪಿ ಆರಂಭಿಸಿದ್ದಾರೆ ಎಂದುಕೊಂಡರೆ 25 ವರ್ಷಗಳ ಬಳಿಕ ಅದು ಅಂ–ದರೆ 2024ರ ಮಾರ್ಚ್ 31ರಂದು ಅದು ಒಟ್ಟು ರೂ.30,00,000 ಹೂಡಿಕೆಗೆ ರೂ.2,74,34,408 ಆಗಿರುತ್ತದೆ. ಆದರೆ ಈ ಹೂಡಿಕೆ ಪಯಣದಲ್ಲಿ ನಡುವೆ ಆತ ಅನೇಕ ಸಂದರ್ಭಗಳಲ್ಲಿ ರೂ.14,00,000 ಹಣವನ್ನು ಹಿಂದಕ್ಕೆ ತೆಗೆದಿರುತ್ತಾನೆ. ಹಾಗಾಗಿ ಆತನ ಒಟ್ಟು ಸಂಪತ್ತು ರೂ.1,81,33,917 ಆಗಿರುತ್ತದೆ. ಅಂ–ದರೆ ಸರಿಸುಮಾರು ಶೇ.34ರಷ್ಟು ಸಂಪತ್ತಿನಲ್ಲಿ ಕುಸಿತ ಉಂಟಾಗಿರುತ್ತದೆ.

ಅಯೋಜಿತ ವೆಚ್ಚಗಳಿಗಾಗಿ ಹಣವನ್ನು ಹಿಂದಕ್ಕೆ ತೆಗೆಯುವುದರ ಬದಲಿಗೆ ಆತ ಶೇ.15ರ ದರದಲ್ಲಿ ಎಲ್‌ಎಎಸ್‌ನ್ನು ಆಯ್ಕೆ ಮಾಡಿಕೊಂಡಿದ್ದರೆ ಒಟ್ಟಾರೆ 5,98,353 ಬಡ್ಡಿ ಪಾವತಿ ಮಾಡಿರುತ್ತಾನೆ. ಅಷ್ಟೂ ಬಡ್ಡಿಯನ್ನು ಪಾವತಿ ಮಾಡಿದ್ದರೂ ಕೂಡ ಆತನಿಗೆ ನಷ್ಟವಾಗಿರುವುದಿಲ್ಲ. ಯಾಕೆಂದರೆ ಆತನ ಎಸ್‌ಐಪಿ ಗಳಿಕೆ ಮುಂದುವರಿದಿರುತ್ತದೆ. ಅಂದರೆ ಆತನ ಉಳಿತಾಯದ ಹಣ ಬಡ್ಡಿ ಭಾಗವನ್ನು ಹೊಂದಾಣಿಕೆ ಮಾಡಿದ ಬಳಿಕ ರೂ.2,68,36,055 (ರೂ.2,74,34,408–ರೂ.5,98,353) ಆಗಿರುತ್ತದೆ.

| 199ರ ಏಪ್ರಿಲ್ 10ರಿಂದ ಸೆನ್ಸೆಕ್ಸ್ ಟಿಆರ್‌ಐನಲ್ಲಿ 10000 ರೂ. ಎಸ್‌ಐಪಿ, 31–03–2024ರಂದು ಉಳಿದ ಮೊತ್ತ | | | | |
|---|---|---|---|---|
| ವರ್ಷ | ಮೊತ್ತ | ಅಯೋಜಿತ ವೆಚ್ಚ | ವಿದ್‌ಡ್ರಾವಲ್ ಬಳಿಕ | ಸಾಲದ ಬಡ್ಡಿ |
| 5 | ₹9,40,893 | ₹2,00,000 | ₹740893 | ₹85,479 |
| 10 | ₹19,78,567 | ₹3,00,000 | ₹13,72,277 | ₹1,28,218 |
| 15 | ₹65,00,563 | ₹4,00,000 | ₹43,45,778 | ₹1,70,958 |
| 20 | ₹1,24,31,264 | ₹5,00,000 | ₹80,70,175 | ₹2,13,697 |
| 25 | **₹2,74,34,408** | **₹14,00,000** | **₹1,81,33,917** | **₹5,98,353** |

ಹಾಗಾಗಿ ಆತ/ಆಕೆ ಮ್ಯುಚ್ಯುಯಲ್ ಫಂಡ್‌ಗಳಿಂದ ವಿದ್‌ಡ್ರಾ ಮಾಡಿದರೂ ಕೂಡ ಗಳಿಕೆಯನ್ನು ಮುಂದುವರಿಸಬಹುದು. ಆದರೆ ಇಂತಹ ಸಾಲವನ್ನು ಪಡೆಯುವುದಕ್ಕೂ ಮುನ್ನ ಕೆಲವು ಬಹುಮುಖ್ಯ ಅಂಶಗಳನ್ನು ಪರಿಗಣಿಸಬೇಕು. ಅದಕ್ಕಾಗಿ ಈ ಲೇಖನ:

**ಎಷ್ಟು ಸಾಲ ಪಡೆಯಬಹುದು?:** ಅನೇಕ ಬ್ಯಾಂಕ್‌ಗಳು ನೀವು ಉಳಿಸಿರುವ ಮೊತ್ತದ ಮೇಲೆ ಗರಿಷ್ಠ ಮತ್ತು ಕನಿಷ್ಠ ಮಿತಿಯನ್ನು ವಿಧಿಸಿರುತ್ತವೆ. ಸೆಕ್ಯುರಿಟಿಯ ಮೌಲ್ಯ ಮತ್ತು ಅದರ ಏರಿಳಿತವನ್ನು ಅವಲಂಬಿಸಿ ಸಾಲದ ಮಿತಿಯನ್ನು ನಿರ್ಧರಿಸಲಾಗುತ್ತದೆ. ಈ ಮೊತ್ತವು ಬ್ಯಾಂಕಿನ ನೀತಿಗೆ ತಕ್ಕಂತೆ ಭಿನ್ನವಾಗಿರಬಹುದು. ಉದಾಹರಣೆಗೆ, ಈಕ್ವಿಟಿ ಮತ್ತು ಹೈಬ್ರೀಡ್ ಫಂಡ್‌ಗಳಿಗೆ ಒಟ್ಟು ಆಸ್ತಿ ಮೌಲ್ಯದ ಶೇ.45ರಿಂದ ಶೇ.50ರಷ್ಟು ಸಾಲವನ್ನು ಪಡೆಯಬಹುದು. ಒಂದು ವೇಳೆ ಡೆಟ್ ಫಂಡ್ ಆಗಿದ್ದರೆ ಒಟ್ಟು ಆಸ್ತಿ ಮೌಲ್ಯದ ಶೇ.65ರಿಂದ 80ರ ತನಕವೂ ಈ ಮಿತಿ ವಿಸ್ತರಿಸುತ್ತದೆ. ಆದರೆ ಪ್ರತಿಯೊಂದು ಮ್ಯುಚ್ಯುಯಲ್ ಫಂಡ್ ಯೋಜನೆಯಲ್ಲಿಯೂ ಅಡವಿಡಲು ಸಾಧ್ಯವಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಆಯಾ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಲ್ಲಿ ಅರ್ಹ ಯೋಜನೆಗಳ ಪಟ್ಟಿಯ ಬಗ್ಗೆ ಪರಿಶೀಲನೆ ನಡೆಸುವುದು ಸೂಕ್ತ.



**ಯಾವ ಬಡ್ಡಿ ದರಕ್ಕೆ?:** ಸಾಮಾನ್ಯವಾಗಿ ಸಾಲವನ್ನು ಎಷ್ಟು ಅವಧಿಗೆ ಪಡೆಯಲಾಗಿದೆ ಮತ್ತು ಯಾವ ಸಂಸ್ಥೆಯಿಂದ ಪಡೆಯಲಾಗಿದೆ ಎನ್ನುವುದರ ಮೇಲೆ ಬಡ್ಡಿ ದರ ನಿಗದಿಯಾಗುತ್ತದೆ. ಎಲ್‌ಎಎಸ್ ಮೇಲಿನ ಬಡ್ಡಿದರ ಸಾಮಾನ್ಯವಾಗಿ ವಾರ್ಷಿಕ ಶೇ.11ರಿಂದ 16ರಷ್ಟಿರುತ್ತದೆ.

**ಯಾವುದೇ ಹೆಚ್ಚುವರಿ ಶುಲ್ಕಗಳು?:** ಪರಿಷ್ಕರಣಾ ಶುಲ್ಕವು ಸಾಮಾನ್ಯವಾಗಿ ಸಾಲದ ಒಟ್ಟು ಮೊತ್ತದ ಮೇಲೆ ಸೊನ್ನೆಯಿಂದ ಶೇ.1ರಷ್ಟಿರುತ್ತದೆ ಅಥವಾ ನಿಶ್ಚಿತ ಮೊತ್ತವನ್ನು ನಿಗದಿ ಮಾಡಲಾಗಿರುತ್ತದೆ. ಹೊಸ ಸಾಲಕ್ಕಾಗಿ ಅಥವಾ ಟಾಪ್–ಟಪ್ ಸಾಲಕ್ಕಾಗಿ ಹೆಚ್ಚುವರಿ ದಾಖಲೆ ಶುಲ್ಕವನ್ನು ಕೂಡ ವಿಧಿಸಬಹುದು.

**ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಈಗಿರುವ ಒಟ್ಟು ಮೊಬಲಗು ಅಥವಾ ಎಸ್‌ಐಪಿ ಹೂಡಿಕೆ ಏನಾಗುತ್ತದೆ?**
ಮ್ಯುಚ್ಯುಯಲ್ ಫಂಡ್‌ಗಳ ಮೇಲೆ ಸಾಲವನ್ನು ಪಡೆಯುವುದರಿಂದ ಮ್ಯುಚ್ಯುಯಲ್ ಫಂಡ್ ಯೂನಿಟ್‌ಗಳ ಮೇಲಿನ ನಿಮ್ಮ ಮಾಲಕತ್ವದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಇದರಿಂದ ಸಂಭಾವ್ಯ ಮಾರುಕಟ್ಟೆ ಏರಿಕೆ ಮತ್ತು ಸಂಚಿತ ಪ್ರಗತಿಯ ಲಾಭವನ್ನು ನೀವು ಪಡೆದುಕೊಳ್ಳಲು ಅಡ್ಡಿಯಾಗುವುದಿಲ್ಲ. ನೀವು ಒಪ್ಪಿಕೊಂಡಂತೆ ಸಾಲ ಮರುಪಾವತಿಯಲ್ಲಿ ವಿಫಲರಾದರೆ ಮಾತ್ರ ಬ್ಯಾಂಕು ಅದನ್ನು ಮಾರಾಟ ಮಾಡಬಹುದು.

**ಇದು ಈಗಲೂ ಬೇರೆ ಯಾವುದೇ ಆಯ್ಕೆಗಿಂತ ಉತ್ತಮವೇ?:** **ಮ್ಯುಚ್ಯುಯಲ್ ಫಂಡ್ ಮೇಲೆ ಸಾಲ v/s ಮೊತ್ತ ಹಿಂದಕ್ಕೆ ಪಡೆಯುವುದು:** ಹೂಡಿಕೆದಾರನ ಮುಂದೆ ಎರಡು ಆಯ್ಕೆಗಳಿರುತ್ತವೆ– ಮ್ಯುಚ್ಯುಯಲ್ ಫಂಡ್ ಮೇಲೆ ಸಾಲವನ್ನು ಪಡೆಯುವುದು ಅಥವಾ ಮ್ಯುಚ್ಯುಯಲ್ ಫಂಡ್ ಯೂನಿಟ್‌ಗಳನ್ನು ಹಿಂದಕ್ಕೆ ಪಡೆಯುವುದು. ಮ್ಯುಚ್ಯುಯಲ್ ಫಂಡ್ ಯೂನಿಟ್‌ಗಳನ್ನು ಬಹುಬೇಗ ಹಿಂದಕ್ಕೆ ಪಡೆಯುವುದರಿಂದ ನಿರ್ಗಮನದ ಭಾರ (exit load) ಬೀಳಬಹುದು. ಆದರೆ ಮ್ಯುಚ್ಯುಯಲ್ ಫಂಡ್ ಮೇಲೆ ಸಾಲವನ್ನು ಪಡೆಯುವುದರಿಂದ ಹೂಡಿಕೆದಾರರ ಮೇಲೆ ಅಂತಹ ಲೋಡ್ ಬೀಳುವುದಿಲ್ಲ. ಅದೇ ರೀತಿ ಈಕ್ವಿಟಿ ಅಥವಾ ಡೆಟ್ ಯೋಜನೆಗಳನ್ನು ಹಿಂದಕ್ಕೆ ಪಡೆದರೆ ತೆರಿಗೆ ಪರಿಣಾಮಗಳು ಉಂಟಾಗಬಹುದು. ಎಲ್‌ಎಎಸ್ ಪ್ರಕರಣದಲ್ಲಿ ದೀರ್ಘಾವಧಿ ಅಥವಾ ಅಲ್ಪಾವಧಿ ಬಂಡವಾಳ ಗಳಿಕೆಯ ಮೇಲೆ ಅಂತಹ ಯಾವುದೇ ಪ್ರಶ್ನೆ ಉದ್ಭವಿಸುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ನಿಮ್ಮ ಹೂಡಿಕೆ ನಿರಂತರವಾಗಿ ಬೆಳವಣಿಗೆ ಕಾಣಲಿದೆ ಮತ್ತು ದೀರ್ಘಾವಧಿಯಲ್ಲಿ ಪವರ್ ಆಫ್ ಕಂಪೌಂಡಿಂಗ್ ಲಾಭವನ್ನು ಕೂಡ ಪಡೆದುಕೊಳ್ಳಬಹುದು.

**ಮ್ಯುಚ್ಯುಯಲ್ ಫಂಡ್ ಮೇಲಿನ ಸಾಲ v/s ವೈಯಕ್ತಿಕ ಸಾಲ:** ಮ್ಯುಚ್ಯುಯಲ್ ಫಂಡ್ ಮೇಲೆ ಪಡೆಯುವ ಸಾಲಕ್ಕೆ ಕೊಲ್ಯಾಟರಲ್ (ಮೇಲಾಧಾರ) ಬೆಂಬಲವಿರುತ್ತದೆ. ಹಾಗಾಗಿ ಅದು ಸಾಲ ಪಡೆಯುವವರಿಗೆ ಹೆಚ್ಚು ಅಪಾಯವಿಲ್ಲ. ಯಾಕೆಂದರೆ ವೈಯಕ್ತಿಕ ಸಾಲಕ್ಕೆ ಹೋಲಿಸಿದರೆ ಕಡಿಮೆ ಬಡ್ಡಿದರವನ್ನು ವಿಧಿಸಲಾಗುತ್ತದೆ. ಉಳಿದ ಸಾಲಗಳಿಗೆ ಹೋಲಿಸಿದರೆ ಇಂತಹ ಸಾಲಗಳಲ್ಲಿ ಪರಿಷ್ಕರಣೆಗೆ ಹೆಚ್ಚು ಸಮಯ ತಗಲುವುದಿಲ್ಲ. ಸಾಮಾನ್ಯವಾಗಿ ಕಾಗದರಹಿತ ಸ್ವರೂಪದಲ್ಲಿ ವಿಧಿವಿಧಾನಗಳು ಪೂರ್ಣಗೊಳ್ಳುತ್ತವೆ. ಆದರೆ ಎಲ್ಲ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳು ಮ್ಯುಚ್ಯುಯಲ್ ಫಂಡ್ ಮೇಲೆ ಸಾಲವನ್ನು ನೀಡುವುದಿಲ್ಲ ಎಂಬುದನ್ನು ಗಮನಿಸಬೇಕು. ಸಾಲವನ್ನು ಒದಗಿಸಿದರೂ ಕೂಡ ಕೆಲವು ಬ್ಯಾಂಕ್‌ಗಳು ಕೆಲವು ಯೋಜನೆಗಳ ಅಡಿಯಲ್ಲಿ ಮಾತ್ರ ನೀಡುವ ಅವಕಾಶವಿರುತ್ತದೆ.

**ಬಾಟಮ್ ಲೈನ್:** ಯಾವುದೇ ಸೌಲಭ್ಯಕ್ಕೆ ಎರಡು ಮುಖಗಳಿರುತ್ತವೆ; ಒಂದು ಒಳಿತು ಇನ್ನೊಂದು ಕೆಟ್ಟದ್ದು. ಆಕರ್ಷಕ ಬಡ್ಡಿದರಗಳು, ಸುಲಭ ಸಾಧ್ಯವಾದ ಮರುಪಾವತಿ ಆಯ್ಕೆಗಳು ಮತ್ತು ಸಾಲದ ತ್ವರಿತ ಅನುಮೋದನೆಯ ಕಾರಣದಿಂದ ಮ್ಯುಚ್ಯುಯಲ್ ಫಂಡ್ ಮೇಲಿನ ಸಾಲಕ್ಕೆ ಹೆಚ್ಚಿನ ಬೇಡಿಕೆ ಇದೆ. ಆದರೆ ಇಂತಹ ವಿಚಾರದಲ್ಲಿ ಯಾವುದೇ ಹಣಕಾಸು ನಿರ್ಧಾರಗಳನ್ನು ಕೈಗೊಳ್ಳುವ ಮುನ್ನ ಹಣಕಾಸು ಸಲಹೆಗಾರರನ್ನು ಸಂಪರ್ಕಿಸುವುದು ನಿರ್ಣಾಯಕ. ಯಾಕೆಂದರೆ ಸದ್ಯದ ನಿಮ್ಮ ಹಣಕಾಸು ಯೋಗಕ್ಷೇಮವನ್ನು ಪೂರೈಸಿಕೊಳ್ಳುವ ಸಂದರ್ಭದಲ್ಲಿ ದೀರ್ಘಾವಧಿಯ ಹಣಕಾಸು ಅಗತ್ಯಗಳ ವಿಚಾರದಲ್ಲಿ ರಾಜಿ ಮಾಡಿಕೊಳ್ಳುವಂತಿಲ್ಲ ಎಂಬುದನ್ನು ಮನಗಾಣಬೇಕು.



# ಹಿರಿಯರ ಆರೋಗ್ಯ ವಿಮೆ: ಸಮಗ್ರ ಸುರಕ್ಷಾ ಕವಚ

**ನಮ್ಮ** ದೇಹಕ್ಕೆ ವಯಸ್ಸಾಗುತ್ತಿದ್ದಂತೆ ಅನೇಕ ಆರೋಗ್ಯ ಸಂಬಂಧಿ ಸಮಸ್ಯೆಗಳು ನಮ್ಮನ್ನು ಅಂಟಿಕೊಳ್ಳುತ್ತವೆ. ಇದು ಸಹಜ ಕೂಡ ಹೌದು. ಭವಿಷ್ಯ ಅನಿಶ್ಚಿತವಾದ ಕಾರಣ ನಾವು ಯಾವುದೇ ಸಂಭವನೀಯತೆಗೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಅಂತಹ ಒಂದು ಸಿದ್ಧತೆಯಲ್ಲಿ ಒಂದೆಂದರೆ ಸಮಗ್ರ ಹಿರಿಯ ನಾಗರಿಕ ಆರೋಗ್ಯ ವಿಮಾ ಯೋಜನೆಯನ್ನು ಖರೀದಿ ಮಾಡುವುದು. ಈ ವಿಶೇಷ ವಿಮಾ ಯೋಜನೆಯು ಹಿರಿಯರ ಆರೋಗ್ಯದ ಅಗತ್ಯಕ್ಕೆಂದೇ ವಿಶಿಷ್ಟವಾಗಿ ವಿನ್ಯಾಸಗೊಳಿಸಲಾಗಿದೆ. ಇದರ ಖರೀದಿಯಿಂದ ವೈದ್ಯಕೀಯ ತುರ್ತು ಸಂದರ್ಭಗಳು ಎದುರಾದಾಗ ಯಾವುದೇ ಚಿಂತೆಗೆ ಅವಕಾಶವಿರುವುದಿಲ್ಲ. ಹಣಕಾಸು ರಕ್ಷಾ ಕವಚ ನಿಮ್ಮ ಸುತ್ತಲೂ ಇರುತ್ತದೆ.




**ಹಿರಿಯ ನಾಗರಿಕರ ಆರೋಗ್ಯ ವಿಮೆಯ ಅಗತ್ಯ:** ಮನುಷ್ಯನಿಗೆ ವಯಸ್ಸಾಗುತ್ತಿದ್ದಂತೆ ಆತನ ಆರೋಗ್ಯ ಸೇವಾ ಸೌಲಭ್ಯದ ವೆಚ್ಚಗಳೂ ಹೆಚ್ಚುತ್ತ ಹೋಗುತ್ತವೆ. ಯಾಕೆಂದರೆ ರೋಗ ನಿರೋಧಕ ಶಕ್ತಿ ತಗ್ಗುತ್ತದೆ. ಇದರಿಂದ ಅಸ್ವಸ್ಥತೆಯ ಪ್ರಮಾಣ ಹೆಚ್ಚುತ್ತದೆ. ಆಗ ಚಿಕಿತ್ಸೆಗಳು ಮತ್ತು ವಿಶೇಷ ಚಿಕಿತ್ಸೆಗಳ ಅಗತ್ಯಗಳೂ ಹೆಚ್ಚುತ್ತವೆ. ಇಂತಹ ಸಂಗತಿಗಳನ್ನು ಪೂರೈಸಲೆಂದೇ ಹಿರಿಯ ನಾಗರಿಕರ ಆರೋಗ್ಯ ವಿಮಾ ಯೋಜನೆಗಳನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿರುತ್ತದೆ.

**ಆರೋಗ್ಯ ಸೇವಾ ವೆಚ್ಚಗಳ ಏರಿಕೆ:** ಇತ್ತೀಚಿನ ದಿನಗಳಲ್ಲಿ ವೈದ್ಯಕೀಯ ವೆಚ್ಚಗಳು ನಿರಂತರ ಹೆಚ್ಚುತ್ತಿವೆ. ಇದರಿಂದ ಹಿರಿಯ ನಾಗರಿಕರಿಗೆ ಅಗತ್ಯ ಚಿಕಿತ್ಸೆಯನ್ನು ಪಡೆದುಕೊಳ್ಳಲು ಸ್ಥಿರವಾದ ಹಣಕಾಸು ಸಹಾಯ ಬೇಕಾಗಿರುತ್ತದೆ.

**ಹೆಚ್ಚುವ ಆರೋಗ್ಯ ಸಮಸ್ಯೆ:** ಹಿರಿಯ ನಾಗರಿಕರಿಗೆ ವಯಸ್ಸಿಗೆ ತಕ್ಕಂತೆ ಕಾಯಿಲೆಗಳು ಹೆಚ್ಚುತ್ತವೆ. ಹೃದಯದ ಸಮಸ್ಯೆ, ಲಕ್ವ, ಮಧುಮೇಹ ಮತ್ತು ಕ್ಯಾನ್ಸರ್‌ನಂತಹ ಸಮಸ್ಯೆಗಳು ಸಾಮಾನ್ಯವಾಗಬಹುದು. ಇಂತಹ ಆರೋಗ್ಯ ಸಮಸ್ಯೆಗಳಿಗೆ ವಿಶೇಷ ಆರೈಕೆ ಮತ್ತು ಔಷಧಿಯ ಅಗತ್ಯವಿರುತ್ತದೆ. ಅದು ದುಬಾರಿಯೂ ಆಗಿರಬಹುದು.

ತೀವ್ರ ಸ್ವರೂಪದ ಕಾಯಿಲೆ: ಅನೇಕ ಮಂದಿ ಹಿರಿಯ ನಾಗರಿಕರು ತೀವ್ರ ಸ್ವರೂಪದ ಆರೋಗ್ಯದ ಸಮಸ್ಯೆಗಳಿಂದ ಬಳಲುತ್ತಿರುತ್ತಾರೆ. ಅವರಿಗೆ ನಿರಂತರ ಆರೈಕೆ, ನಿರ್ವಹಣೆ ಮತ್ತು ಚಿಕಿತ್ಸೆಯ ಅಗತ್ಯವಿರುತ್ತದೆ. ಆದರಿಂದ ವೈದ್ಯಕೀಯ ವೆಚ್ಚಗಳೂ ಹೆಚ್ಚುತ್ತವೆ.

**ಅನಿರೀಕ್ಷಿತ ವೈದ್ಯಕೀಯ ಅಗತ್ಯಗಳು:** ಅತ್ಯಂತ ಆರೋಗ್ಯವಂತರಾಗಿರುವ ಹಿರಿಯರು ಕೂಡ ಅನಿರೀಕ್ಷಿತ ವೈದ್ಯಕೀಯ ತುರ್ತು ಸಂದರ್ಭಗಳನ್ನು ಎದುರಿಸಬೇಕಾಗಿ ಬರಬಹುದು. ಅವುಗಳಲ್ಲಿ ಅಪಘಾತ ಅಥವಾ ಹಠಾತ್ ಅಸ್ವಸ್ಥತೆ ಸೇರಿವೆ. ಅದು ದೊಡ್ಡ ಹಣಕಾಸು ಹೊರೆಯನ್ನು ತಂದೊಡ್ಡಬಹುದು.

**ಸೀಮಿತ ಹಣಕಾಸು ಸಂಪನ್ಮೂಲಗಳು:** ಅನಿರೀಕ್ಷಿತವಾಗಿ ಬರುವ ವೈದ್ಯಕೀಯ ವೆಚ್ಚಗಳನ್ನು ಭರಿಸಲು ಕೂಡಿಟ್ಟ ನಿವೃತ್ತಿ ಹಣ ಸಾಕಾಗದೇ ಇರಬಹುದು. ಅದರಲ್ಲೂ ಮುಖ್ಯವಾಗಿ ಅವು ದೀರ್ಘಕಾಲವಿದ್ದರೆ ಹೆಚ್ಚಿನ ನಿಗಾ ಬೇಕಾಗುತ್ತದೆ.

**ಹಿರಿಯ ನಾಗರಿಕರ ಆರೋಗ್ಯ ವಿಮಾ ಯೋಜನೆಯ ಪ್ರಮುಖ ಅಂಶಗಳು**

**ಮೊದಲೇ ಅಸ್ತಿತ್ವದಲ್ಲಿರುವ ರೋಗಗಳಿಗೆ ಸೌಲಭ್ಯ:** ಹೆಚ್ಚಿನ ಹಿರಿಯ ನಾಗರಿಕ ಆರೋಗ್ಯ ವಿಮಾ ಯೋಜನೆಗಳು ಮೊದಲೇ ಅಸ್ತಿತ್ವದಲ್ಲಿರುವ ರೋಗಗಳಿಗೆ ಸೌಲಭ್ಯವನ್ನು ಒದಗಿಸುತ್ತವೆ. ಇದರಿಂದ ಹಿರಿಯರು ಅಧಿಕ ವೆಚ್ಚದ ಬಗ್ಗೆ ಹೆಚ್ಚಿನ ಚಿಂತೆ ಮಾಡದೇ ಈಗಿರುವ ಆರೋಗ್ಯ ಸಮಸ್ಯೆಗೆ ಚಿಕಿತ್ಸೆಯನ್ನು ಪಡೆಯಲು ಸಾಧ್ಯವಾಗುತ್ತದೆ.

**ಸಮಗ್ರ ಸೇವಾಸೌಲಭ್ಯ:** ಈ ಯೋಜನೆಯಲ್ಲಿ ವ್ಯಾಪಕ ಶ್ರೇಣಿಯ ವೈದ್ಯಕೀಯ ವೆಚ್ಚಗಳು ಒಳಗೊಂಡಿರುತ್ತವೆ. ಒಳರೋಗಿ ಚಿಕಿತ್ಸೆ, ಆಸ್ಪತ್ರೆಗೆ ದಾಖಲಾಗುವುದಕ್ಕೆ ಮೊದಲು ಮತ್ತು ನಂತರದ ವೆಚ್ಚಗಳು, ಆಂಬುಲೆನ್ಸ್

ಶುಲ್ಕಗಳು ಮತ್ತು ದೈನಂದಿನ ಚಿಕಿತ್ಸೆಗಳು ಇದರಲ್ಲಿ ಸೇರಿವೆ.

**ಜೀವಮಾನ ನವೀಕರಣ ಸೌಲಭ್ಯ:** ಹಿರಿಯ ನಾಗರಿಕರ ಆರೋಗ್ಯ ವಿಮಾ ಯೋಜನೆಗಳು ಜೀವಮಾನ ಪೂರ್ತಿ ನವೀಕರಣ ಸೌಲಭ್ಯವನ್ನು ಒದಗಿಸುತ್ತವೆ. ಇದರಿಂದ ಪಾಲಿಸಿದಾರನು ಜೀವಂತ ಇರುವ ತನಕ ಅದರ ಸೌಲಭ್ಯಗಳು ಮುಂದುವರಿಯುತ್ತವೆ.

**ಹಿರಿಯ ನಾಗರಿಕರ ಆರೋಗ್ಯ ವಿಮೆಯ ಪ್ರಯೋಜನಗಳು**

**ಹಣಕಾಸು ಭದ್ರತೆ:** ವೈದ್ಯಕೀಯ ವೆಚ್ಚಗಳ ಸೌಲಭ್ಯವನ್ನು ಒದಗಿಸುವುದರಿಂದ ಹಿರಿಯ ನಾಗರಿಕರ ಆರೋಗ್ಯ ವಿಮಾ ಯೋಜನೆ ಹಣಕಾಸು ಸುರಕ್ಷತೆಯನ್ನು ಕಲ್ಪಿಸಲಿದೆ. ಇದ–ರಿಂದ ಅಸ್ವಸ್ಥತೆಯ ಅತಿಯಾದ ವೆಚ್ಚಗಳಿಂದ ಉಂಟಾಗಬಹುದಾದ ಅಭದ್ರತೆಯಿಂದ ಪಾಲಿಸಿದಾರರನ್ನು ರಕ್ಷಿಸಲಿದೆ.

**ಮಾನಸಿಕ ನೆಮ್ಮದಿ:** ಆರೋಗ್ಯ ಸಂಬಂಧಿ ವೆಚ್ಚಗಳನ್ನು ವಿಮೆ ಮೂಲಕ ಭರಿಸಲಾಗುತ್ತದೆ ಎಂಬ ಭಾವನೆಯೇ ಹಿರಿಯರಿಗೆ ಮತ್ತು ಅವರ ಕುಟುಂಬಕ್ಕೆ ಮಾನಸಿಕ ನೆಮ್ಮದಿಯನ್ನು ನೀಡುತ್ತದೆ ಮತ್ತು ಕಷ್ಟದ ಸಮಯದಲ್ಲಿ ಒತ್ತಡವನ್ನು ತಗ್ಗಿಸುತ್ತದೆ.

**ಗುಣಮಟ್ಟದ ಆರೋಗ್ಯ ಸೌಲಭ್ಯ:** ವಿಮೆಯಿಂದ ಹಣಕಾಸು ಸಹಾಯ ಸಿಗುತ್ತಿರುವುದರಿಂದ ಹಿರಿಯ ನಾಗರಿಕರು ಗುಣಮಟ್ಟದ ಆರೋಗ್ಯ ಸೇವಾ ಸೌಲಭ್ಯಗಳನ್ನು ಸುಲಭವಾಗಿ ಪಡೆಯಲು ಸಾಧ್ಯವಾಗುತ್ತದೆ. ಇದರಲ್ಲಿ ವಿಶೇಷ ತಜ್ಞರ ಜೊತೆ ಸಮಾಲೋಚನೆ ಮತ್ತು ಅತ್ಯಾಧುನಿಕ ಚಿಕಿತ್ಸೆಗಳು ಸೇರಿವೆ.

**ತೆರಿಗೆ ಪ್ರಯೋಜನಗಳು:** ಹಿರಿಯ ನಾಗ–ರಿಕರ ಆರೋಗ್ಯ ವಿಮೆಗೆ ಪಾವತಿ ಮಾಡಿದ ಪ್ರೀಮಿಯಂ ತೆರಿಗೆ ಕಡಿತಕ್ಕೆ ಅರ್ಹವಾಗಿದೆ. ಇದರಿಂದಾಗಿ ಆರೋಗ್ಯ ವಿಮೆಯನ್ನು ಖರೀದಿಸಲು ಹೆಚ್ಚಿನ ಪ್ರೇರಣೆ ಸಿಕ್ಕಂತಾಗಿದೆ.

**ಗ್ರಾಹಕರಿಗೆ ಯೋಗ್ಯವಾದ ಯೋಜನೆಗಳು:** ಬಹಳಷ್ಟು ವಿಮಾ ಸಂಸ್ಥೆಗಳು ಗ್ರಾಹಕ–ರಿಗೆ ಅಗತ್ಯವಾದ ಆಯ್ಕೆಗಳನ್ನು ಒದಗಿಸುತ್ತವೆ. ಇದರಿಂದಾಗಿ ಆಯಾ ಹಿರಿಯರು ತಮ್ಮ ಆದ್ಯತೆಗಳಿಗೆ ಅನುಸಾರವಾಗಿ ಆಯ್ಕೆಗಳನ್ನು ಮಾಡಿಕೊಳ್ಳಬಹುದು.

**ಸಮಗ್ರ ಹಿರಿಯ ನಾಗರಿಕ ಆರೋಗ್ಯ ವಿಮಾ ಯೋಜನೆ ಆಯ್ಕೆ ಮಾಡಿಕೊಳ್ಳುವುದು ಹೇಗೆ?**

**ಸೌಲಭ್ಯ:** ನಿಮ್ಮ ಅಗತ್ಯಗಳಿಗೆ ತಕ್ಕಂತೆ ವೈದ್ಯಕೀಯ ವೆಚ್ಚಗಳನ್ನು ಒದಗಿಸುವ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಉತ್ತಮ ಸೌಲಭ್ಯದ ಖಾತರಿ ನೀಡುತ್ತದೆ.

**ಆಸ್ಪತ್ರೆಗಳ ಜಾಲ:** ನಿಮಗೆ ವಿಮೆಯನ್ನು ಒದಗಿಸಿರುವವರು ನಿಮ್ಮ ಪ್ರದೇಶದಲ್ಲಿ ವ್ಯಾಪಕ ಆಸ್ಪತ್ರೆ ಜಾಲವನ್ನು ಹೊಂದಿದೆ ಎಂಬ ಬಗ್ಗೆ ಖಾತರಿಮಾಡಿಕೊಳ್ಳಿ.

**ಕ್ಲೈಮ್ ಇತ್ಯರ್ಥ ಪ್ರಕ್ರಿಯೆ:** ವಿಮಾದಾರರು ದಕ್ಷತೆಯಿಂದ, ಯಾವುದೇ ಕಿರಿಕಿರಿ ಇಲ್ಲದೆ ಕ್ಲೈಮ್ ಇತ್ಯರ್ಥ ಮಾಡುತ್ತಾರೆ ಎಂಬ ವಿಶ್ವಾಸವಿರಲಿ.

**ಹೆಚ್ಚುವರಿ ಪ್ರಯೋಜನಗಳು:** ಕೆಲವು ವಿಮಾ ಯೋಜನೆಗಳು ಹೆಚ್ಚುವರಿ ಸೌಲಭ್ಯವನ್ನು ಒದಗಿಸುತ್ತವೆ. ಉಚಿತ ಆರೋಗ್ಯ ತಪಾಸಣೆ ಅಥವಾ ರಿಯಾಯಿತಿ ದರದಲ್ಲಿ ರೋಗ ನಿರ್ಬಂಧ ವ್ಯವಸ್ಥೆ.

**ಬಾಟಮ್ ಲೈನ್:** ಹಿರಿಯ ನಾಗರಿಕರ ಆರೋಗ್ಯ ವಿಮಾ ಯೋಜನೆಯಲ್ಲಿ ಹೂಡಿಕೆ ಮಾಡುವುದು ಬುದ್ಧಿವಂತಿಕೆಯ ನಿರ್ಧಾರ. ಅದರಿಂದ ಅನೇಕ ಮಹತ್ವದ ಪ್ರಯೋಜನಗಳು ಲಭ್ಯವಾಗುತ್ತವೆ. ಅನಿರೀಕ್ಷಿತ ವೈದ್ಯಕೀಯ ವೆಚ್ಚಗಳನ್ನು ಭರಿಸಲು, ಉತ್ತಮ ಗುಣಮಟ್ಟದ ಆರೋಗ್ಯ ಸೌಲಭ್ಯಗಳನ್ನು ಪಡೆಯಲು ಈ ಯೋಜನೆಯಿಂದ ಸಾಧ್ಯವಾಗುತ್ತದೆ. ಈ ವಿಮಾ ಪಾಲಿಸಿಯಿಂದ ಹಿರಿಯ ನಾಗರಿಕರು ಆರೋಗ್ಯವಂತರಾಗಿ, ಹೆಚ್ಚು ಸ್ವತಂತ್ರರಾಗಿ ಜೀವನ ಸಾಗಿಸಲು ಅನುಕೂಲ. ಹಿರಿಯ ನಾಗರಿಕರ ಮುಂದಿರುವ ಪ್ರತಿಯೊಂದು ವರ್ಷವೂ ಸುವರ್ಣ ವರ್ಷ. ಹಾಗಾಗಿ ಇಂತಹ ಕಾಲಘಟ್ಟದಲ್ಲಿ ಆರೋಗ್ಯ ವಿಮಾ ಪಾಲಿಸಿಯೊಂದು ಅವರಿಗೆ ರಕ್ಷೆಯಾಗಿರುವುದು ಅತ್ಯಗತ್ಯ.


INSPIRE INDIA
WEALTH PVT LTD
ಹೂಡಿಕೆ ವೇಳೆ -ನೆನಪಿರಲಿ ಇನ್‌ಸ್ಪೈರ್ ಇಂಡಿಯಾ ಎಎಂಎಫ್ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು




ಹಕ್ಕು ತ್ಯಾಗ

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆ ಮಾಡುವ ಸಮರ್ಪಕತೆ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆ ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈ.ಲಿ.
#65, ಸುರಾಸ ಎನ್‌ಕ್ಲೇವ್, ಮೊದಲ ಮಹಡಿ
ಪುಟ್ಟಣ್ಣ ರಸ್ತೆ, ಗಾಂಧಿ ಬಜಾರ್,
ಬಸವನಗುಡಿ, ಬೆಂಗಳೂರು -560004
9035414414, 080-42129917
info@inspireindiafs.com

"ನಮ್ಮ ಗುರಿ ತಲುಪಲು ಅತ್ಯಗತ್ಯವಾದ ಆಯುಧಗಳೆಂದರೆ ಕನಸು ಮತ್ತು ಶ್ರದ್ಧೆ"